# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 445
2. ಸದಸ್ಯರ ಹೆಸರು : ಶ್ರೀ .ಟಿ.ಎ. ಶರವಣ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 16-02-2023
4. ಉತ್ತರಿಸುವವರು : ಮುಖ್ಯಮಂತ್ರಿಗಳು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನಲ್ಲಿ ಮೆಟ್ರೋ ಕಾಮಗಾರಿ ದುರಂತದಲ್ಲಿ ಇಲ್ಲಿಯವರೆಗೆ ಎಷ್ಟು ಜನ ಅಪಘಾತ ಮತ್ತು ಸಾವಿಗೀಡಾಗಿದ್ದಾರೆ; | ಬೆಂಗಳೂರಿನಲ್ಲಿ ಮೆಟ್ರೋ ಕಾಮಗಾರಿ ದುರಂತದಲ್ಲಿ ಇಲ್ಲಿಯವರೆಗೂ 50 ಮಂದಿ ಅಪಘಾತಕ್ಕೆ ಒಳಪಟ್ಟಿರುತ್ತಾರೆ. ಇದರಲ್ಲಿ 38 ಮಂದಿ ಸಾವಿಗೀಡಾಗಿರುತ್ತಾರೆ. |
| ಆ) | ಮೆಟ್ರೋ ಕಾಮಗಾರಿ ಅವಘಡಗಳಿಗೆ ಕಾರಣರಾದ ಎಷ್ಟು ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲೆ ಯಾವ ಕ್ರಮಕೈಗೊಳ್ಳಲಾಗಿದೆ; | ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ 3 ಅಭಿಯಂತರರನ್ನು ಅಮಾನತ್ತುಗೊಳಿಸಲಾಗಿದೆ. ಗುತ್ತಿಗೆದಾರರಿಗೆ ಇದುವರೆಗೂ ರೂ.1,77,00,000/- ಗಳಷ್ಟು ದಂಡ ವಿಧಿಸಲಾಗಿದೆ. |
| ಇ) | ಮೆಟ್ರೋ ಕಾಮಗಾರಿ ಸ್ಥಳದಲ್ಲಿ ಗಾಯಗೊಂಡ ಮತ್ತು ಸಾವಿಗೀಡಾದ ವ್ಯಕ್ತಿಗಳ ಕುಟುಂಬಗಳಿಗೆ ಪರಿಹಾರ ನೀಡಲಾದ ಮೊತ್ತ ಎಷ್ಟು; ಹಾಗೂ ಕಾಮಗಾರಿ ಸ್ಥಳದಲ್ಲಿ ಅವಘಡ ತಡೆಯಲು ಸುರಕ್ಷತೆ ಮತ್ತು ಮುನ್ನೆಚ್ಚರಿಕೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ಮೆಟ್ರೋ ಕಾಮಗಾರಿ ಸ್ಥಳದಲ್ಲಿ ಗಾಯಗೊಂಡ ಮತ್ತು ಸಾವಿಗೀಡಾದ ವ್ಯಕ್ತಿಗಳ ಕುಟುಂಬಗಳಿಗೆ ಇದುವರೆಗೂ ರೂ.3,15,74,389/- ಗಳಷ್ಟು ಪರಿಹಾರವನ್ನು ನೀಡಲಾಗಿದೆ.<br><br>ಕಾಮಗಾರಿ ಸ್ಥಳದಲ್ಲಿ ಅವಘಡ ತಡೆಯಲು ಸುರಕ್ಷತೆ ಮತ್ತು ಮುನ್ನೆಚ್ಚರಿಕೆಯ ಸಲುವಾಗಿ ಬೆಂಗಳೂರು ಮೆಟ್ರೋ ರೈಲು ಯೋಜನೆಗಳಲ್ಲಿ ಪ್ರತಿಯೊಂದು ಕೆಲಸದ ಒಪ್ಪಂದದಲ್ಲಿ ಸುರಕ್ಷತೆ, ಆರೋಗ್ಯ ಮತ್ತು ಪರಿಸರ ಕೈಪಿಡಿ (SHE Manual)ಯು ಒಂದು ಭಾಗವಾಗಿರುತ್ತದೆ. ಪ್ರತಿಯೊಂದು ಗುತ್ತಿಗೆದಾರನೂ ಕೈಪಿಡಿಯ ಪ್ರಕಾರವೇ ಕೆಲಸ ಮಾಡುವುದು ಕಡ್ಡಾಯವಾಗಿರುತ್ತದೆ.<br><br>ಇದರಿಂದ ಈ ಕೆಳಕಂಡ ಗುರಿ ಮತ್ತು ಕಾರ್ಯಗಳನ್ನು ಸಾಧಿಸಬಹುದಾಗಿದೆ.<br>• ಶೂನ್ಯ ಗಾಯಗಳನ್ನು ಸಾಧಿಸುವ ಗುರಿ.<br>• ಶೂನ್ಯ ವರದಿ ಮಾಡಬಹುದಾದ ಪರಿಸರ ಘಟನೆಗಳು.<br>• ಅನುಮೋದಿತ ಗುತ್ತಿಗೆದಾರರ ಸುರಕ್ಷತೆ, ಆರೋಗ್ಯ ಮತ್ತು ಪರಿಸರ ಕೈಪಿಡಿ (SHE Manual) ಯೋಜನೆಗೆ ಅನುಗುಣವಾಗಿ ಎಲ್ಲಾ ಸಿಬ್ಬಂದಿಯನ್ನು ಆಯ್ಕೆ ಮಾಡುವುದು.<br>• ಅನುಮೋದಿತ ಸುರಕ್ಷತೆ, ಆರೋಗ್ಯ ಮತ್ತು ಪರಿಸರ ಕೈಪಿಡಿ (SHE Manual) ಯೋಜನೆಯ ಪ್ರಕಾರ ತಪಾಸಣೆ ಮತ್ತು ಪರಿಶೋಧನೆಗಳನ್ನು ನಡೆಸುವುದು. |

ಕಡತ ಸಂಖ್ಯೆ: ನಅಇ 31 ಪಿ.ಆರ್.ಜೆ 2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ